quickmarketreports.com

Date :08-02-2016

# ಅಕ್ಕಿ ರಫ್ತಿನಲ್ಲಿ ಜಾಗತಿಕ ಅತೀ ಹೆಚ್ಚು ಅಕ್ಕಿ ರಫ್ತು ದೇಶ ಥ್ಯಾಲೇಂಡ್‌ನ್ನು ಹಿಂದಿಕ್ಕಿದ ಭಾರತ

2015 ರಲ್ಲಿ 10.23 ಮಿಲಿಯನ್ ಟನ್ ಅಕ್ಕಿ ರಫ್ತು ಮಾಡಿ ಜಾಗತಿಕ ಅತೀ ಹೆಚ್ಚು ಅಕ್ಕಿ ರಫ್ತು ಮಾಡುವ ದೇಶವಾದ ಥ್ಯಾಲೆಂಡನ್ನು ಭಾರತ ಹಿಂದಿಕ್ಕಿದೆ ಎಂದು ಥ್ಯಾಲೆಂಡನ ಪ್ರಮುಖ ಅಕ್ಕಿ ರಫ್ತು ಸಂಸ್ಥೆ ಹೇಳಿದೆಯೆನ್ನಲಾಗಿದೆ 2015ರಲ್ಲಿ ಥ್ಯಾಲೆಂಡ 9.8 ಮಿಲಿಯನ್ ಟನ್ ಅಕ್ಕಿ ರಫ್ತು ಮಾಡಿದ್ದು, ಇದು ಥ್ಯಾಲೆಂಡ್ ಇದರ ಹಿಂದಿನ ವರ್ಷ ರಫ್ತು ಮಾಡಿದ ಅಕ್ಕಿಗಿಂತ 10.8% ಕಡಿಮೆಯೆಂದು ಹೇಳಲಾಗಿದೆ. ತೈಲ ದರಗಳು ಕುಸಿತ ಮತ್ತು ಜಾಗತಿಕ ಆರ್ಥಿಕ ಹಿನ್ನಡೆಯಿಂದಾಗಿ ಖರೀದಿಸುವ ಪ್ರಮುಖ ದೇಶಗಳ ಖರೀದಿ ಶಕ್ತಿ ಕಡಿಮೆಯಾಗಿರುವುದು ಥ್ಯಾಲೆಂಡ್‌ನ ಅಕ್ಕಿ ರಫ್ತು ಕಡಿಮೆಯಾಗಲು ಕಾರಣವೆನ್ನಲಾಗಿದೆ. ಭಾರತ 2015ರಲ್ಲಿ 10.23 ಮಿಲಿಯನ್ ಟನ್ ಅಕ್ಕಿ ರಫ್ತು ಮಾಡುವ ಮೂಲಕ ಜಾಗಲಿಕ ಅತೀ ಹೆಚ್ಚು ಅಕ್ಕಿ ರಫ್ತು ಮಾಡಿದ ದೇಶವಾಗಿದೆ. ಥ್ಯಾಲೆಂಡ್ 9.8 ಮಿಲಿಯನ್ ಟನ್ ಅಕ್ಕಿ ರಫ್ತು ಮಾಡುವುದರೊಂದಿಗೆ ಜಾಗತಿಕ ದ್ವಿತೀಯ ಸ್ಥಾನ ರಫ್ತು ದೇಶವಾಗಿದೆ. ವಿಯೆಟ್ನಾಂ ಅನಂತರದ ಸ್ಥಾನದಲ್ಲಿದ್ದು, ಚೀನಾ ಜಾಗತಿಕ ಅತೀ ಹೆಚ್ಚು ಅಕ್ಕಿ ಆಮದು ದೇಶವಾಗಿ ಉಳಿದು ಕೊಂಡಿದೆಯೆನ್ನಲಾಗಿದೆ.